**ಕಲಾಪ್ರಕಾರಗಳು ಪೋಷಣೆಯನ್ನು ಬಯಸುವುದರಿಂದ, ಪ್ರತಿಕ್ರಿಯೆಗಳು, ನಿಷ್ಠುರವಾಗಿ ಮತ್ತು ಮುಕ್ತವಾಗಿ ಇರಬಹುದು ಎಂದು ಭಾವಿಸುವಿರಾ?**

ನೃತ್ಯಕಲಾವಿದರು ತಮ್ಮ ಸುತ್ತಮುತ್ತಲಿನ ಜಗತ್ತಿನ ಸಂಬಂಧ ಕಡಿದುಕೊಂಡು ದ್ವೀಪದಲ್ಲಿ ಜೀವನ ಮಾಡುತ್ತಾರೆಯೇ? ಇಲ್ಲವಲ್ಲ. ಅಂದಮೇಲೆ ಪ್ರತಿಕ್ರಿಯಿಸುವುದು ಅವರ ಸಾಮಾಜಿಕ ಜವಾಬ್ದಾರಿಯಾಗಿದೆ. ಸಾಹಿತ್ಯವು ಹೇಗೆ ಜೀವನಕ್ಕೆ ಹಿಡಿದ ಕನ್ನಡಿ ಎಂಬ ಗ್ರಹಿಕೆಯಿದೆಯೋ, ಅದೇ ರೀತಿ ನೃತ್ಯ ಕೂಡ ಜೀವನಕ್ಕೆ ಹಿಡಿದ ಕನ್ನಡಿಯೇ ಆಗಿದೆ. ನೃತ್ಯಕಲಾವಿದರು ಸಾಮಾಜಿಕ ಆಗುಹೋಗುಗಳ ಬಗ್ಗೆ ಕಾಳಜಿ ಹೊಂದಿದ್ದು, ಅದನ್ನು ತಮ್ಮ ಕಲಾಮಾಧ್ಯಮದಲ್ಲಿ ಅಭಿವ್ಯಕ್ತಿಗೊಳಿಸುವುದು ಮುಖ್ಯ. ತನ್ನ ಸುತ್ತ ಏನು ನಡೆಯುತ್ತಿದೆ ಎಂಬುದರ ಬಗ್ಗೆ ಜಾಗೃತಿಯಿಂದ ಇರಬೇಕು. ಅದು ಘೋಷಣೆಯೋ ಹೋರಾಟವೋ ಆಗಿರಬೇಕಿಲ್ಲ. ತಮ್ಮ ಕಲಾಮಾಧ್ಯಮದ ಮೂಲಕ ಜನರ ಅಂತರಂಗವನ್ನು ತಟ್ಟಿ, ಅವರಲ್ಲಿ ಜಾಗೃತಿ ಮೂಡುವಂತೆ ಮಾಡುವ ಸಾಮರ್ಥ್ಯವನ್ನು ದೇವರು ಕೊಟ್ಟಿರುತ್ತಾರೆ. ಈ ಜಾಗೃತಿ ಮತ್ತು ಜವಾಬ್ದಾರಿಯ ಭಾವವು ನನ್ನ ನೃತ್ಯದಲ್ಲಿ ಪ್ರತಿಫಲನಗೊಳ್ಳುವುದು ಖಂಡಿತ. ಉದಾಹರಣೆಗೆ, ಜನಜೀವನಕ್ಕೆ ಅತ್ಯಗತ್ಯವಾದ ಹಸಿರು ಸಂಪತ್ತು ನಾಶವಾಗುತ್ತಿದ್ದರೆ, ಮರಗಳನ್ನು ಕಡಿಯುವ ಪ್ರವೃತ್ತಿ ಹೆಚ್ಚುತ್ತಿದ್ದರೆ, ನಾನು ಪ್ರಸ್ತುತಪಡಿಸುವ 'ವೃಕ್ಷಾಂಜಲಿ' ನೃತ್ಯದಲ್ಲಿ ಆ ಭಾವವು ಖಂಡಿತ ನುಸುಳುತ್ತದೆ. ನಾನು ವಾಸಿಸುವ ದೆಹಲಿಯಲ್ಲಿ ನಿರ್ಭಯ ಪ್ರಕರಣ ನಡೆದಾಗ, ಸಬಲೀಕರಣಗೊಂಡ ಮಹಿಳೆಯ ಧ್ವನಿಯಾಗಿ ನಾನು ರಂಗದ ಮೇಲೆ ನೃತ್ಯದ ಮೂಲಕ ಮಹಿಳೆಯರಿಗೆ ಹೇಗೆ ಶಕ್ತಿ ತುಂಬಬಹುದು ಎಂದು ಯೋಚಿಸುತ್ತೇನೆ. ಮಹಿಳೆಯನ್ನು ಗೌರವಿಸುವುದು ಎಷ್ಟು ಮುಖ್ಯ ಎಂಬ ಸಂದೇಶವನ್ನು ಬಿತ್ತುವುದು ನನ್ನ ಆದ್ಯತೆಯಾಗಿರುತ್ತದೆ. ಸಾಮಾನ್ಯವಾಗಿ ನಾವು ಕಲಿಯುವ ಕೃಷ್ಣ, ರಾಧಾ, ಶಿವ ಮುಂತಾದ ಮಾರ್ಗಂ ನೃತ್ಯಗಳಷ್ಟೇ ಅಲ್ಲದೆ, ಒಬ್ಬ ನೃತ್ಯಕಲಾವಿದ ಸಮಾಜದ ಆಗುಹೋಗುಗಳಿಗೆ ಪ್ರತಿಕ್ರಿಯಿಸುವ ನಿಟ್ಟಿನಲ್ಲಿ ನೃತ್ಯ ರೂಪಿಸಿಕೊಳ್ಳುವುದು ಅಷ್ಟೇ ಮುಖ್ಯ ಎಂದು ನಾನು ಭಾವಿಸುವೆ.

◆ **ಹೊಸ ಕೊರಿಯೊಗ್ರಫಿಯೂ ನೃತ್ಯ ಕಲಾವಿದರ ಜವಾಬ್ದಾರಿಗಳಲ್ಲಿ ಒಂದು ಎಂದು ನೀವು ಪ್ರತಿಪಾದಿಸುತ್ತೀರಿ. ಆ ಬಗ್ಗೆ ವಿವರಿಸುವಿರಾ?**

ನಾವು ಚಿಕ್ಕಂದಿನಲ್ಲಿ ಶಾಲೆಗೆ ತೆರಳಿ ಅಕ್ಷರಮಾಲೆಯನ್ನು ಕಲಿಯುತ್ತೇವೆ. ಒಂದಷ್ಟು ಪಾಠಗಳನ್ನು ಕಲಿಯುತ್ತ, ವ್ಯಾಕರಣ ಮುಂತಾಗಿ ಭಾಷೆಗೆ ಸಂಬಂಧಿಸಿದ ಪ್ರಾಥಮಿಕ ಜ್ಞಾನವನ್ನು ಪಡೆಯುತ್ತೇವೆ. ಆ ಭಾಷೆಯನ್ನು ಬಳಸಿ ಎಷ್ಟೊಂದು ಹೊಸ ವಿಚಾರಗಳನ್ನು ಕಲಿಯುತ್ತೇವೆ! ಲೇಖನಗಳನ್ನು, ಕಥೆ, ಕಾದಂಬರಿಗಳನ್ನು ಬರೆಯುತ್ತೇವಲ್ಲ. ಹಾಗೆಯೇ ನೃತ್ಯಕಲಾವಿದರೂ ತಮಗೆ ನೃತ್ಯ ತರಗತಿಯಲ್ಲಿ ದೊರೆಯುವ ಪ್ರಾಥಮಿಕ ಜ್ಞಾನವನ್ನು ಬಳಸಿಕೊಂಡು ಹೊಸ ವಿಚಾರಗಳನ್ನು ಸೃಷ್ಟಿಸುವ ಪ್ರಯತ್ನ ಮಾಡುತ್ತಲೇ ಇರಬೇಕು. ಹಾಗಾದಾಗ ಕಲಾಪ್ರಕಾರವು ಸಮಕಾಲೀನವಾಗಿ ಉಳಿಯುವುದು ಸಾಧ್ಯವಾಗುತ್ತದೆ. ಕಲಾವಿದರು ಈ ಜವಾಬ್ದಾರಿಯನ್ನು ನಿಭಾಯಿಸಿದಾಗ, ಭರತನಾಟ್ಯವು ಒಂದು ಹಳೆಯ ಕಾಲದ ಕಲಾಪ್ರಕಾರ ಎಂಬ ತಪ್ಪು ಕಲ್ಪನೆಯು ಜನರಲ್ಲಿ ಮೂಡದಂತೆ ಮಾಡುವುದು ಸುಲಭವಾಗುತ್ತದೆ. ಹೊಸ ಪರಿಕಲ್ಪನೆಗಳು ಹೊಸನೀರಿನಂತೆ ಹರಿಯುತ್ತಿರಬೇಕು.

◆ **ಇಂದು ದೇಹವನ್ನು 'ಫಿಟ್' ಆಗಿ ಇಡುವುದು ಯುವಜನರ ಮುಂದಿರುವ ಒಂದು ಸಾಮಾನ್ಯ ಸವಾಲಾಗಿದೆ. ಇದಕ್ಕೆ ನಿಮ್ಮ ಬಳಿ ಉತ್ತರವಿದೆ ಎಂದುಕೊಳ್ಳುವೆ.**

ನೃತ್ಯಕಲಾವಿದರು ದೇಹದ ಸದೃಢತೆಗೆ ಆದ್ಯತೆ ನೀಡಬೇಕಾಗುತ್ತದೆ. ಆದರೆ ಅದಕ್ಕೆ ಪೂರಕವಾದ ಆಹಾರ ಪದ್ಧತಿಯನ್ನು ಒಂದೇ ಸೂತ್ರದಲ್ಲಿ ಹೆಣೆದು ಹೇಳುವುದು ಸಾಧ್ಯವಿಲ್ಲ. ಯಾಕೆಂದರೆ, ಪ್ರತಿಯೊಬ್ಬ ವ್ಯಕ್ತಿಯೂ ವಿಭಿನ್ನ ಮತ್ತು ವಿಶೇಷ. ಆಹಾರ ಎನ್ನುವುದು ತೀರಾ ವೈಯಕ್ತಿಕವಾದ ವಿಷಯ. ಎಲ್ಲರಿಗೂ ಅನ್ವಯವಾಗುವ ಒಂದು ಆಹಾರ ಸೂತ್ರವಿಲ್ಲ. ಅವರವರ ದೇಹ ಸಂವಿಧಾನವನ್ನು ಅವರವರು ಅರ್ಥ ಮಾಡಿಕೊಳ್ಳಬೇಕು. ನಮ್ಮ ದೇಹಕ್ಕೆ ಏನು ಅಗತ್ಯ ಎಂಬುದನ್ನು ಅರ್ಥ ಮಾಡಿಕೊಳ್ಳಲೇಬೇಕು. ಕೆಲವರಿಗೆ ಕಾರ್ಬೋಹೈಡ್ರೇಟ್ ಅರಗಿಸಿಕೊಳ್ಳುವ ಶಕ್ತಿಯಿರುತ್ತದೆ.